**ಪಾಠ-11** **ಜೂನ್ 5-11**

# ಹೊಸ ಒಡಂಬಡಿಕೆಯ ಪರ್ಣಶಾಲೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ವಿಮೋಚನಕಾಂಡ 25:8, ಯೆಶಾಯನು 53:4–12, ಇಬ್ರಿಯರಿಗೆ 10:4, ಇಬ್ರಿಯರಿಗೆ 9:14, ಇಬ್ರಿಯರಿಗೆ 8:1–6, 1 ತಿಮೊಥೆಯರಿಗೆ 2:5,6.

**ಸ್ಮರಣವಾಕ್ಯ : "ಮತ್ತು ಈ ಕಾರಣದಿಂದ, ಆತನು ಒಂದು ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ. ಮೊದಲನೆಯ ಒಡಂಬಡಿಕೆಯ ಕಾಲದಲ್ಲಿ, ನಡೆದ ಅಕ್ರಮಗಳ ಪರಿಹಾರಕ್ಕಾಗಿ ಆತನು ಮರಣವನ್ನು ಅನುಭವಿಸಿದ್ದರಿಂದ ದೇವರಿಂದ ಕರಿಸಿಕೊಂಡವರು ವಾಗ್ದಾನವಾಗಿದ್ದ ನಿತ್ಯಬಾಧ್ಯತೆಯನ್ನು ಹೊಂದುವುದಕ್ಕೆ ಆತನ ಮೂಲಕ ಮಾರ್ಗವಾಯಿತು"** (ಇಬ್ರಿಯರಿಗೆ 9:15).

ಒಂದು ಸಂಜೆ, ಚಂದ್ರರಹಿತವಾಗಿತ್ತು ಆಕಾಶವು ಶಾಯಿಚಲ್ಲಿದ ಕತ್ತಲ್ಲಾಗಿತ್ತು. ಫ್ರಾಂಕ್ ಎಂಬ ವ್ಯಕ್ತಿಯು ನಿರ್ಜನ ಪ್ರದೇಶವಾದ ರಸ್ತೆಯಲ್ಲಿ ನಡೆದುಹೋಗುತ್ತಿದ್ದ. ಸ್ವಲ್ಪ ಹೊತ್ತಿನ ಮೇಲೆ ಆತನ ಹಿಂದೆ ಯಾರೋ ಬರುವ ಶಬ್ದವನ್ನು ಕೇಳಿದ ಯಾರೋ ಆತನನ್ನು ಕತ್ತಲಲ್ಲಿ ಹಿಂಬಾಲಿಸುತ್ತಿದ್ದರು. ಹಿಂಬಾಲಿಸುವಾತನು ಇವನನ್ನು ಸಂಧಿಸಿ, ನೀನು ಮುದ್ರಿನಾದ ಫ್ರಾಂಕ್ ಎಂದು ಕೇಳಿದ?

ಹೌದು ನಾನೇ, ಆದರೆ ನಿನಗೆ ಹೇಗೆ ಗೊತ್ತಾಯಿತು? ಅಪರಿಚಿತ ಹೇಳಿದ,

---

* ಈ ವಾರದ ಪಾಠವನ್ನು ಜೂನ್ 12ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ನೀನು ಯಾರೆಂದು ನನಗೆ ಗೊತ್ತಿಲ್ಲ, ಆದರೆ ನಿನ್ನ ಸಹೋದರ ನನಗೆ ಚೆನ್ನಾಗಿ ಪರಿಚಯ ಉಂಟು. ಈ ಕತ್ತಲೆಯಲ್ಲೂ ನೀನು ನಡೆಯುವ ಶೈಲಿಯನ್ನು ನಿನ್ನ ಆಕಾರ, ಎಲ್ಲವೂ ನೀನು ಆತನ ಸಹೋದರನಾಗಿರಬಹುದು ಎಂದು ನಾನು ಭಾವಿಸಿದೆ, ಯಾಕೆಂದರೆ ಆತನಿಗೆ ಒಬ್ಬ ಸಹೋದರನಿದ್ದಾನೆಂದು ಆತನು ಹೇಳಿದ್ದನು.

ಈ ಕಥೆಯು ಒಂದು ಶಕ್ತಿಮಯ ಸತ್ಯವನ್ನು ಇಸ್ರಾಯೇಲ್‌ರವರ ಪರ್ಣಶಾಲೆ ಸೇವೆಯನ್ನು ಕುರಿತು ತಿಳಿಸುವಂತದ್ದಾಗಿದೆ. ಸತ್ಯವೇದವು ಹೇಳುತ್ತದೆ. ಇದು ನಿಜಸ್ವರೂಪದ ಛಾಯೆ ಮಾತ್ರ. ಆದರೆ ಈ ಛಾಯೆಯಲ್ಲಿ ಸಾಕಷ್ಟು ಈ ಲೋಕದ ಪರ್ಣಶಾಲೆಯುಲ್ಲಿ ಸ್ಪಷ್ಟವಾಗಿ ಪ್ರತಿನಿಧಿಸುವ ಸತ್ಯವನ್ನು ಮುಂತಿಳಿಸುತ್ತಿತ್ತು. ಪರಲೋಕದ ಪರ್ಣಶಾಲೆಯ ಕೀರ್ತಿಯನ್ನು ಕ್ರಿಸ್ತನ ಮರಣವನ್ನು ಮತ್ತು ಮಹಾಯಾಜಕನ ಸೇವೆಯನ್ನು ಪ್ರತಿನಿಧಿಸುತ್ತಿತ್ತು.

ಈ ವಾರದ ಪಾಠದ ಪಕ್ಷಿನೋಟ: ಯಾಕೆ ದೇವರು, ಇಸ್ರಾಯೇಲ್ ಜನರು ಈ ಗುಡಾರವನ್ನು ಕಟ್ಟಬೇಕಾಗಿತ್ತು? ಕ್ರಿಸ್ತನು ನಮ್ಮ ಬದಲಿ ಎಂದು ಈ ಗುಡಾರ ಸೇವೆಯು ಯಾವ ಸತ್ಯವನ್ನು ಕಲಿಸುತ್ತಿತ್ತು? ನಮ್ಮ ಪ್ರತಿನಿಧಿಯಾಗಿ ಯೇಸುಕ್ರಿಸ್ತನು ಯಾವ ಕೆಲಸವನ್ನು ಮಾಡುತ್ತಿದ್ದಾನೆ?

**ಭಾನುವಾರ** **ಜೂನ್ 6**

## ಸಂಬಂಧಗಳು

"ನಾನು ನಿಮ್ಮ ನಡುವೆ ನಿವಾಸ ಮಾಡುವೆನು; ನಿಮ್ಮನ್ನು ತಳ್ಳಿಬಿಡುವುದಿಲ್ಲ; ನಿಮ್ಮ ನಡುವೆ ತಿರುಗಾಡುತ್ತಾ ನಿಮಗೆ ದೇವರಾಗಿರುವೆನು; ನೀವು ನನ್ನ ಪ್ರಜೆಯಾಗಿರುವಿರಿ" ಯಾಜಕಕಾಂಡ 26:11,12.

ಒಂದು ವಿಷಯಮಾತ್ರ ಸ್ಪಷ್ಟವಾಗಿದೆ, ಹಳೆಒಡಂಬಡಿಕೆ ಇರಬಹುದು, ಹೊಸ ಒಡಂಬಡಿಕೆ ಇರಬಹುದು; ಕರ್ತನು ತನ್ನ ಜನರೊಡನೆ ಸಮೀಪವಾದ ಮತ್ತು ಪ್ರೀತಿಯ ಸಂಬಂಧವನ್ನು ಪಡೆಯಲು ಪ್ರಯತ್ನಿಸುತ್ತಾನೆ. ಈ ಒಡಂಬಡಿಕೆಗಳು ಸಹಜವಾಗಿ ಸಂಬಂಧ ಕಟ್ಟುವ "ನಿಯಮಗಳನ್ನು" ಸ್ಥಾಪಿಸಲು ಸಹಾಯ ಮಾಡುತ್ತದೆ.

ಯಾವುದೇ ಸಮಯ ಅಥವಾ ಸನ್ನಿವೇಶದಲ್ಲಿ ಒಡಂಬಡಿಕೆ ಮಾಡಿಕೊಳ್ಳಲು ಸಂಬಂಧಗಳು ಬಹಳ ಅವಶ್ಯಕ. ಸಂಬಂಧಗಳು ಉಳಿಯಲು, ಸಂಪರ್ಕ ಒಡನಾಟ, ಮತ್ತು ಸಂಧಿಸುವಿಕೆ, ವಿಶೇಷವಾಗಿ ಪಾಪಿಗಳು, ಸಂದೇಹ ಪಡುವುದು, ತಪ್ಪು ಮಾಡುವ ಸ್ವಭಾವದವರಾದ ಮಾನವರಿಗೆ ಖಂಡಿತವಾಗಿ ಕರ್ತನು ಇದನ್ನು ತಿಳಿದು ಮುಂದಾಗಿ ಅವರೇ ನಮಗಾಗಿ ವ್ಯಕ್ತಪಡಿಸಿಕೊಂಡರು. ಮಾನವನ ಬೀಳುವಿಕೆಯ ಮಿತಿಯೊಳಗೆ ನಾವು ಅರ್ಥಗರ್ಭಿತವಾಗಿ ಆತನ ಕೂಡ ಸಂಬಂಧಿಸಬಹುದು.

ವಿಮೋಚನಕಾಂಡ 25:8 ಓದಿರಿ; ಕರ್ತನು ಇಸ್ರಾಯೇಲ್ಯರಿಗೆ ಒಂದು ಪರ್ಣಶಾಲೆಯನ್ನು ಕಟ್ಟಲು ಆಜ್ಞಾಪಿಸುತ್ತಾನೆ. ಈ ಕಾರ್ಯ ಮಾಡಲು ಕರ್ತನು ಯಾವ ಕಾರಣವನ್ನು ಕೊಟ್ಟನು?

ಈ ಪ್ರಶ್ನೆಗೆ ಉತ್ತರವು ಖಂಡಿತವಾಗಿ ಮತ್ತೊಂದು ಪ್ರಶ್ನೆ ತರುವಂತದ್ದಾಗಿದೆ. ಅದು ಯಾವ ಕಾರಣಕ್ಕಾಗಿ ಕರ್ತನು ತನ್ನ ಜನರ ಮಧ್ಯ ವಾಸಿಸಲು ಬಯಸುತ್ತಾನೆ?

ಬಹುಶಃ ಮೇಲೆ ಕಂಡುಬರುವ ಎರಡು ವಚನಗಳಲ್ಲಿ ಸತ್ಯವನ್ನು ಕಂಡುಕೊಳ್ಳಬಹುದು. ಗಮನಿಸಿ: ಕರ್ತನು ಅವರ ಮಧ್ಯ ವಾಸಿಸುವನು, ಹಾಗು ಆತನು ಹೇಳುವುದೇನೆಂದರೆ ಅವರನ್ನು ನಾನು ಅಸಹ್ಯಿಸುವುದಿಲ್ಲ. ಆತನು ಹೇಳುವುದೇನೆಂದರೆ ಅವರು ಆತನ ಜನರಾಗುವರು (ಯಾಜಕಕಾಂಡ 26:11,12). ಈ ವಚನಗಳಲ್ಲಿ ಕಂಡುಬರುವ ಅಂಶವನ್ನು ಗಮನಿಸಿರಿ ಮತ್ತೆ ಈ ವಚನಗಳಲ್ಲಿ ಸ್ಪಷ್ಟವಾಗಿ ಸಂಬಂಧದ ಅಂಶ ಕಂಡುಬರುತ್ತದೆ. ಕೆಲವು ನಿಮಿಷವನ್ನು ತೆಗೆದುಕೊಂಡು ಯಾಜಕಕಾಂಡ 36:11,12 ವಿಮೋಚನೆ 25:8ನ್ನು ವಿಶ್ಲೇಷಿಸಿ.

ಕರ್ತನು ತನ್ನ ಜನರ ಸಂಗಡ ಒಂದು ಸಂಬಂಧವನ್ನು ಹುಡುಕುವ ಅನೇಕ ಅಂಶಗಳನ್ನು ಬರೆಯಿರಿ.

"ನನ್ನ ಆತ್ಮವು ನಿಮ್ಮನ್ನು ಅಸಹ್ಯಿಸುವುದಿಲ್ಲ" ಎಂಬ ವಾಕ್ಯಗಳನ್ನು ಮೇಲೆ ಕೇಂದ್ರೀಕರಿಸಿರಿ. ಈ ಪರ್ಣಶಾಲೆಯ ಮುಖಾಂತರವೇ ಪಾಪಿಗಳಾದ ಜನರನ್ನು

ಕರ್ತನನ್ನು ಅಂಗೀಕರಿಸಲು ಸಾಧನ ಹಾಗೂ ಒಡಂಬಡಿಕೆ ಮಾಡಿಕೊಳ್ಳುವುದು ಬಹಳ ಮುಖ್ಯವಾದದ್ದು.

**ಸೋಮವಾರ** **ಜೂನ್ 7**

## ಪಾಪ, ಯಾಗ ಮತ್ತು ಅಂಗೀಕಾರ (ಇಬ್ರಿಯ 9:22)

ಹಳೆ ಒಡಂಬಡಿಕೆಯಲ್ಲಿ ಪಾಪಿಗಳು ತಮ್ಮ ಪಾಪದಿಂದ ಮತ್ತು ಅಪರಾಧದಿಂದ ತಪ್ಪಿಸಿಕೊಳ್ಳಲು ದೇವರ ನೇಮಕದಂತೆ ಪಶುಯಜ್ಞ ಒಂದು ಮಾರ್ಗವಾಗಿತ್ತು. ಇಸ್ರಾಯೇಲ್ಯರು ಯಜ್ಞ ಮತ್ತು ಕಾಣಿಕೆಗಳ ವಿವರವು ಯಾಜಕಕಾಂಡ 1 ರಿಂದ 7 ಅಧ್ಯಾಯಗಳಿವೆ. ಅನೇಕ ವಿಧವಾದ ಯಜ್ಞಗಳಲ್ಲಿ ರಕ್ತದ ಉಪಯೋಗ ಮತ್ತು ವಿಸರ್ಜನೆ ಬಗ್ಗೆ ಕುರಿತು ಹೆಚ್ಚು ಗಮನ ಹರಿಸುವೆನು.

ಇಸ್ರಾಯೇಲ್ಯರ ಯಜ್ಞಗಳಲ್ಲಿ ರಕ್ತದ ಪಾತ್ರವು ಒಂದು ಬಹು ಐಕ್ಯತಗೊಳಿಸುವ ಲಕ್ಷಣವಾಗಿತ್ತು. ಒಬ್ಬ ವ್ಯಕ್ತಿಯು ಪಾಪ ಮಾಡಿ ಮತ್ತೆ ಒಡಂಬಡಿಕೆಯ ಸಂಬಂಧವನ್ನು ಮತ್ತು ಆಜ್ಞೆಗಳನ್ನು ಮುರಿದರೆ ಅವನ ಬದಲಿಗೆ ಪಶುವನ್ನು ಯಜ್ಞ ಮಾಡುವುದರಿಂದ ಅವರ ಮತ್ತು ಮನುಷ್ಯರ ಸಂಗಡ ಪೂರ್ವಸ್ಥಿತಿಗೆ ತರಬಹುದಾಗಿತ್ತು.

ಪಾಪದಿಂದ ಮತ್ತು ಅಪರಾಧದಿಂದ ಶುದ್ಧತೆಯನ್ನು ದೇವರೇ ನೇಮಿಸಿದ ಯಜ್ಞಗಳನ್ನು ಅರ್ಪಿಸುವ ಮಾರ್ಗವಿತ್ತು. ಪಾಪಿಗಳನ್ನು ಶುದ್ಧಗೊಳಿಸಿ, ವ್ಯಕ್ತಿಗಳ ಪಾಪವನ್ನು ಮತ್ತು ಅಪರಾಧವನ್ನು ಪರ್ಣಶಾಲೆಗೆ ರಕ್ತವನ್ನು ಪ್ರೋಕ್ಷಿಸುವುದರಿಂದ ವರ್ಗಾವಣೆ ಮಾಡಬಹುದಾಗಿತ್ತು. ಪಶ್ಚಾತ್ತಾಪಪಟ್ಟ ಪಾಪಿಯು ದೇವರ ಸಂಗಡದ ಪೈಕಿ ಒಡಂಬಡಿಕೆಯುನ್ನು ರಕ್ಷಿಸುವ ದೇವರ ಸಂಗಡ ಸಂಧಾನ ಮಾಡಿಕೊಳ್ಳಬಹುದಾಗಿತ್ತು. ಪಶುಯಜ್ಞಗಳಲ್ಲಿ ಯಾವ ಪ್ರವಾದನಾ ಪ್ರಾಮುಖ್ಯತೆಗಳಿವೆ? ನೋಡಿ ಯೆಶಾಯ 53:4–12, ಇಬ್ರಿಯ 10:4.

ಪಾಪಿಗಳನ್ನು ತಮ್ಮ ಪಾಪದಿಂದ ಮತ್ತು ಅಪರಾಧದಿಂದ ಬಿಡುಗಡೆಯಾಗಲು ಹಳೆ ಒಡಂಬಡಿಕೆಯಲ್ಲಿ ಪಶು ಯಜ್ಞಗಳು ದೇವರ ನೇಮಕವಾಗಿತ್ತು. ಪಾಪಿಯ ಸ್ಥಾನವನ್ನು ಅಪರಾಧದಿಂದ ಬದಲಿಸಿ ಮರಣಕ್ಕೆ ಯೋಗ್ಯನಾಗಿದ್ದಾಗ್ಯೂ ಅದನ್ನು ಕ್ಷಮಿಸಿ ದೇವರ ಮತ್ತು ಮನುಷ್ಯರ ಸಂಗಡ ಒಡಂಬಡಿಕೆಯನ್ನು ಪುನರ್

ಸ್ಥಾಪಿಸುವಂತದ್ದಾಗಿತ್ತು. ಪಶುಯಜ್ಞಗಳು ಒಂದು ರೀತಿ ಪ್ರವಾದನವಾಗಿತ್ತು. ಯಾವುದೇ ಪ್ರಾಣಿಯ ಬಲಿಯು/ ಮಗುವು ಮಾನವ ಪಾಪ ಮತ್ತು ಅಪರಾದಕ್ಕೆ ಬದಲಿ ಆಗಲು ಸಾಧ್ಯವಿಲ್ಲ. ಪೌಲನು ತನ್ನ ಸ್ವಂತ ಭಾಷೆಯಲ್ಲಿ ಹೇಳುತ್ತಾನೆ: ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವುದು ಅಸಾಧ್ಯವಾಗಿದೆಯಲ್ಲಾ (ಇಬ್ರಿಯರಿಗೆ 10:4). ಪಶುಯಾಗವು ಮುಂಬರುವ ದೈವೀಕ ಮಾನವನು ದೇವರ ಸೇವಕನ ಚಿಹ್ನೆಯಾಗಿತ್ತು. ಲೋಕದ ಪಾಪಕ್ಕೋಸ್ಕರ ಆತನು ಅವರ ಬದಲಿ ಬಲಿಯಾಗಿ ಮರಣವನ್ನು ಅನುಭವಿಸಬೇಕಾಗಿತ್ತು. ಈ ರೀತಿ ಪಾಪಿಯು ಪಾಪ ಪರಿಹಾರಕ್ಕಾಗಿ ಕ್ಷಮಿಸಲ್ಪಡುವ ಕ್ರೈಸ್ತನಿಂದ ಅಂಗೀಕರಿಸಲ್ಪಡುತ್ತಿದ್ದ ಹಾಗೂ ಒಡಂಬಡಿಕೆಯ ಸಂಬಂಧವು ಸ್ಥಾಪಿಸಲ್ಪಡುತ್ತಿತ್ತು.

**ಮಂಗಳವಾರ** **ಜೂನ್ 8**

## ಬದಲೀಕರಣ/ ಬದಲಿಸುವುದು

ಈತನು ನಮ್ಮನ್ನು ಕೆಟ್ಟದ್ದಾಗಿರುವ ಈಗಿನ ದುಷ್ಟಯುಗದೊಳಗಿಂದ ಬಿಡಿಸಬೇಕೆಂದು ನಮ್ಮ ತಂದೆಯಾದ ದೇವರ ಚಿತ್ತಕ್ಕೆ ಅನುಸಾರವಾಗಿ ನಮ್ಮ ಪಾಪಗಳ ದೆಸೆಯಿಂದ ತನ್ನನ್ನು ಮರಣಕ್ಕೆ ಒಪ್ಪಿಸಿದನು (ಗಲಾತ್ಯದವರಿಗೆ 1:4).

ಹೊಸ ಒಡಂಬಡಿಕೆಯ ಮುಖ್ಯ ತಿರುಳು ಏನೆಂದರೆ ಯೇಸುಕ್ರಿಸ್ತನು ಲೋಕದ ಪಾಪ ಸಲುವಾಗಿ ಬಲಿಯಾಗಿ ಸತ್ತನು. ಈ ಸತ್ಯವು ರಕ್ಷಣೆ ಯೋಜನೆಯ ಅಡಿಪಾಯದ ಹೊರತು ಬೇರೆ ಪ್ರಶ್ನೆ ಇಲ್ಲ.

ಯಾವ ವೇದಾಂತವು ಯೇಸುಕ್ರಿಸ್ತನ ರಕ್ತದಿಂದ ಪ್ರಾಯಶ್ಚಿತ್ತವನ್ನು ನಿರಾಕರಿಸುತ್ತದೋ ಅದು ಕ್ರೈಸ್ತೀಯ ಹೃದಯ ಮತ್ತು ಆತ್ಮವನ್ನು ನಿರಾಕರಿಸುತ್ತದೆ. ರಕ್ತರಹಿತ ಕೃಪೆಯು ಯಾರನ್ನು ರಕ್ಷಿಸಲು ಸಾಧ್ಯವಿಲ್ಲ.

ಈ ದಿನದ ವಾಕ್ಯವನ್ನು ಧ್ಯಾನಿಸಿ, ನಂತರ ಈ ಪ್ರಶ್ನೆಗಳಿಗೆ ಉತ್ತರಿಸಿ. ಯೇಸುಕ್ರಿಸ್ತನು ತಾನಾಗಿಯೇ ಸತ್ತನೆ? ಆತನು ಯಾರಿಗಾಗಿ ಸತ್ತನು? ಆತನ ಮರಣವು ಏನನ್ನು ಸಾಧಿಸಿತು?

ಪರಿಪೂರ್ಣ ರಕ್ಷಣೆ ಯೋಜನೆಗೆ ಬದಲಿಸುವುದೇ ಕೈಕೀಲಿಯಾಗಿದೆ. ನಮ್ಮ ಪಾಪಗಳಿಂದ ನಾವು ಸಾಯಬೇಕಿತ್ತು. ನಮ್ಮ ಮೇಲೆ ಇಟ್ಟ ಪ್ರೀತಿಯಿಂದ

ಕ್ರಿಸ್ತನು "ನಮ್ಮ ಪಾಪಗಳ ದೆಸೆಯಿಂದ ತನ್ನನ್ನು ಮರಣಕ್ಕೆ ಒಪ್ಪಿಸಿದನು" (ಗಲಾತ್ಯ 1:4).

ನಾವು ಹೊಂದಬೇಕಾದ ಮರಣಕ್ಕಾಗಿ ಆತನು ಸತ್ತನು. ಎಲ್ಲಾ ಪಾಪಿಗಳಿಗೆ, ಕ್ರಿಸ್ತನ ಮರಣವು ಒಂದು ಬದಲೀಕರಣ. ಈ ಸತ್ಯದ ಮೇಲೆ ಇತರ ಸತ್ಯಗಳು ಹಿಂಬಾಲಿಸುವುದು. ನಮ್ಮ ನಿರೀಕ್ಷೆಯು, ಪುನಸ್ಥಾಪನೆ, ಸ್ವತಂತ್ರ ಕ್ಷಮಾಪಣೆ. ಪರದೈಸ್‌ಲ್ಲಿ ನಿತ್ಯಜೀವ ಎಲ್ಲಾ ಸತ್ಯವು ಯೇಸುಕ್ರಿಸ್ತನು ನಮ್ಮ ಪಾಪಕ್ಕಾಗಿ ಮಾಡಿದ ಕೆಲಸದ ಮೇಲೆ ಅವಲಂಬಿಸಿದೆ. ಇದಲ್ಲದೆ ನಮ್ಮ ನಂಬಿಕೆಯು ಅರ್ಥರಹಿತವಾಗಿದೆ. ನಾವು ನಮ್ಮ ನಿರೀಕ್ಷೆ ಮತ್ತು ಭರವಸೆಯನ್ನು ಒಂದು ಮೀನಿನ ಪ್ರತಿಮೆ ಮೇಲೆ ಇಡಬಹುದು. ಆದರೆ ರಕ್ಷಣೆ ಬರುವುದರ ರಕ್ತದಿಂದಲೇ, ಯೇಸುಕ್ರಿಸ್ತನ ರಕ್ತದಿಂದಲೇ...

ಈ ಕೆಳಕಂಡ ವಚನಗಳನ್ನು ಗಮನಿಸಿ. ಮತ್ತಾಯ 26:28, ಎಫೆಸದವರಿಗೆ 2:13, ಇಬ್ರಿಯರಿಗೆ 9:14 ಮತ್ತು 1 ಪೇತ್ರ 1:19. ಈ ವಚನಗಳು ರಕ್ತದ ಬಗ್ಗೆ ಹೇಳುವುದು ಏನು? ರಕ್ಷಣೆ ಯೋಜನೆಯಲ್ಲಿ ರಕ್ತದ ಪಾತ್ರವು ಏನಾಗಿದೆ?

"ನಾವು ಅಪನಂಬಿಕೆ ಪಡುವುದು ದೇವರ ಚಿತ್ತವಲ್ಲ. ನಮ್ಮ ಆತ್ಮಗಳನ್ನು ಚಿತ್ರಹಿಂಸೆ ಪಡಿಸಿಕೊಂಡು, ದೇವರು ನನ್ನನ್ನು ಅಂಗೀಕರಿಸಿಕೊಳ್ಳುವುದಿಲ್ಲ. ನಾನು ಬಹಳ ಪಾಪ ಮಾಡಿದ್ದೇನೆ. ನಾನು ಅನರ್ಹನು... ನೀನು ಹೇಳಬಹುದು ನನಗೆ ಗೊತ್ತು ನಾನು ಪಾಪಿ, ಆಕಾರಣದಿಂದ ನನಗೆ ಒಬ್ಬ ರಕ್ಷಕನು ಬೇಕು... ನನ್ನನ್ನು ರಕ್ಷಿಸಿಕೊಳ್ಳಲು ಯಾವ ಅರ್ಹತೆ ಅಥವಾ ಒಳ್ಳೇತನ ಇಲ್ಲ. ಇದರಿಂದ ನನ್ನ ರಕ್ಷಣೆ ಹೊಂದಲು ಆದರೆ ನಾನು ಎಲ್ಲರಿಗೂ ಪಶ್ಚಾತ್ತಾಪದ ರಕ್ತ ನಿಷ್ಕಳಂಕ ದೇವರ ಕುರಿಮರಿಯಾದ ದೇವರ ಮುಂದೆ ಒಪ್ಪಿಸುಕೊಡುತ್ತೇನೆ. ಲೋಕದ ಪಾಪವನ್ನು ನಿವಾರಿಸುವಂತದ್ದು. ಇದೊಂದು ನನ್ನ ಮನವಿ" (ಎಲೆನ್ ಜಿ ವೈಟ್, ದ ಫತ್ ಐ ಲಿವ್, ಪುಟ 100).

**ಬುಧವಾರ** **ಜೂನ್ 9**

## ಹೊಸ ಒಡಂಬಡಿಕೆಯ ಮಹಾಯಾಜಕ

ದೇವರು ತನ್ನ ಜನರ ಮಧ್ಯ ವಾಸಿಸಲು ಆರಿಸದ ಈ ಲೋಕದ

ಪರ್ಣಶಾಲೆಯು ಪಶುಗಳ ಯಾಗಗಳು ಕೇಂದ್ರೀಕೃತವಾಗಿತ್ತು. ಆದರೂ ಈ ಸೇವೆಯು ಪಶುಗಳ ಮರಣದಲ್ಲಿ ಮುಕ್ತಾಯವಾಗಲಿಲ್ಲ. ಯಾಜಕರು ಈ ಪರ್ಣಶಾಲೆಯಲ್ಲಿ ಪಾಪಿಗಳ ಪರವಾಗಿ ವಧಿಸಲ್ಪಟ್ಟ ಯಜ್ಞದ ರಕ್ತವನ್ನು ಪ್ರೋಕ್ಷಿಸಿದರು. ಈ ಎಲ್ಲಾ ಸೇವೆಯು ಬರಿದಾಗಿತ್ತು. ಕ್ರಿಸ್ತನು ಲೋಕಕ್ಕೆ ಏನು ಮಾಡುವನೋ ಅದರ ಸಂಕೇತವಾಗಿತ್ತು.

ಸಾಂಕೇತಿಕವಾಗಿ ಪರ್ಣಶಾಲೆಯಲ್ಲಿ ನಡೆಯುವ ಸೇವೆಯು ಪ್ರಾಣಿಗಳ ಮರಣದಲ್ಲಿ ಅಂತ್ಯಗೊಳ್ಳಲಿಲ್ಲ. ಹಾಗೆಯೇ ಕ್ರಿಸ್ತನ ಕೆಲಸ ಕೃಜೆಯ ಮೇಲೆ ಸತ್ತಾಗ ಮುಕ್ತಾಯವಾಗಲಿಲ್ಲ.

ಇಬ್ರಿಯರಿಗೆ 8:1–6 ಈ ದಿನ ಅಧ್ಯಯನ ಮಾಡಿರಿ. ಈ ವಚನಗಳ ಮೇಲೆ ಪ್ರಾರ್ಥಿಸಿರಿ. ಕರ್ತನು ನಿಮಗೆ ಅರ್ಥಮಾಡಿಕೊಳ್ಳಲು ಸಹಾಯ ಮಾಡಲೆಂದು ಕೇಳಿರಿ. ಈ ವಾಕ್ಯದಲ್ಲಿ ಹೇಳಿರುವುದನ್ನು ನಮಗೆ ಮುಖ್ಯವಾದದ್ದು ಎಂದು ತಿಳಿಯತಕ್ಕದ್ದು. ಈ ಕಾರ್ಯಮಾಡಿದ ಮೇಲೆ ನಿಮ್ಮ ಸ್ವಂತ ವಾಕ್ಯದಲ್ಲಿ ದೇವರ ಸಂದೇಶವೇನೆಂದು ಬರೆಯಿರಿ. ಈ ವಚನಗಳು ಹೊಸ ಒಡಂಬಡಿಕೆಯನ್ನು ಅರ್ಥಮಾಡಿಕೊಳ್ಳಲು ಹೇಗೆ ಸಹಾಯ ಮಾಡುತ್ತದೆ ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿರಿ.

ಈ ಲೋಕದಲ್ಲಿ ಪರ್ಣಶಾಲೆ ಹೇಗೆ ಇತ್ತೋ, ಹಳೇ ಒಡಂಬಡಿಕೆಯ ಅಡಿಯಲ್ಲಿ ಯಾಜಕತ್ವದ ಸೇವೆ ಇತ್ತೋ, ಹಾಗೆಯೇ ಪರಲೋಕದ ಪರ್ಣಶಾಲೆಯಲ್ಲಿಯೂ, ಪರಲೋಕದ ಯಾಜಕತ್ವ ಮತ್ತು ಪರಲೋಕದ ಸೇವೆಯು ಹೊಸ ಒಡಂಬಡಿಕೆಯ ಅಡಿಯಲ್ಲಿದೆ. ಹಳೇ ಒಡಂಬಡಿಕೆಯಲ್ಲಿ ಹೇಗೆ ಛಾಯೆ, ಚಿಹ್ನೆ ಆಗಿತ್ತೋ (ಇಬ್ರಿಯ 8:5) ಅದು ಹೊಸ ಒಡಂಬಡಿಕೆಯಲ್ಲಿ ಅಸ್ತಿತ್ವಕ್ಕೆ ಬಂದಿತು.

ನೀತಿ ಬಾಹ್ಯವಾದ (ನೀತಿಗೆ ಸಂಬಂಧಪಡದ) ಪ್ರಾಣಿಯು ನಮ್ಮ ಬದಲಿ ಹೇಗೆ ಆಯಿತು. ಹಾಗೆಯೇ ಪಾಪರಹಿತ ಯೇಸುಕ್ರಿಸ್ತನು ನಮ್ಮ ಬದಲೀಕರಣವಾದ ಪ್ರಾಣಿಗಳ ರಕ್ತದ ಬದಲು ಕ್ರಿಸ್ತನ ರಕ್ತವು ನಮಗಿದೆ. ಮನುಷ್ಯರು ಮಾಡಿದ ಪರ್ಣಶಾಲೆಗಿಂತ, ನಮಗೆ ನಿಜವಾಗಿ ದೇವರೇ ಮಾಡಿದ ಸತ್ಯ ಪರ್ಣಸಾಲೆಯ

ನಮ್ಮಗುಂಟು (ಇಬ್ರಿಯ 8:2). ಪಾಪ ಮಾಡುವ ಅಥವಾ ತಪ್ಪು ಮಾಡುವ ಯಾಜಕರಿಗಿಂತ, ಯೇಸು ನಮಗಾಗಿ ಯಾಜಕ ಸೇವೆ ನಮ್ಮ ಪರವಾಗಿ ಮಾಡುತ್ತಾನೆ. ಇವೆಲ್ಲವೂ ನಮ್ಮ ಮನಸ್ಸಿನಲ್ಲಿ ಇಟ್ಟುಕೊಂಡು, ಪೌಲನು ಮಾತುಗಳನ್ನು ಗಮನಿಸಿರಿ. ಈ ಅತ್ಯಂತ ವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯ ಮಾಡಿದರೆ ತಪ್ಪಿಸಿಕೊಳ್ಳುವುದು ಹೇಗೆ?" (ಇಬ್ರಿಯ 2:3).

**ಇದರ ಬಗ್ಗೆ ಚಿಂತಿಸಿ :** ನಮ್ಮ ಪರವಾಗಿ ಯೇಸು ಪಾಪರಹಿತ ಜೀವಿತ ಜೀವಿಸಿ ನಮ್ಮ ಪರವಾಗಿ ಶಿಲುಬೆ ಮೇಲೆ ಸತ್ತು, ಈಗ ಪರಲೋಕದಲ್ಲಿ ನಮ್ಮ ಪರವಾಗಿ ಪರ್ಣಶಾಲೆಯಲ್ಲಿ ಸೇವೆ ಮಾಡುತ್ತಿದ್ದಾನೆ. ಇವೆಲ್ಲವೂ ನಿಮ್ಮನ್ನು ಭಯಂಕರ ಪರಿಣಾಮದಿಂದ ಹಾಗೂ ಅಂತಿಮ ಪರಿಣಾಮ ಪಾಪ ಬಿಡಿಸಲು ಮಾಡಿದ ಕಾರ್ಯ.

ಮಾರನೆಯ ದಿನ ಈ ಮೂರು ಸಂದೇಶದ ಬಗ್ಗೆ ಯಾರ ಸಂಗಡವಾದರೂ ಮಾತಾಡಲು ಯೋಜಿಸಿರಿ.

**ಗುರುವಾರ** **ಜೂನ್ 10**

## ಪರಲೋಕದ ಸೇವೆ (ಇಬ್ರಿಯರಿಗೆ 9:24)

ಇಬ್ರಿಯರಿಗೆ 9:24ನ್ನು ಅಧ್ಯಯನ ಮಾಡಿ; ಯಾವ ಹಿನ್ನೆಲೆಯಲ್ಲಿ ಕೊಡಲ್ಪಟ್ಟಿದೆ. ನಮ್ಮ ಪರವಾಗಿ ತ್ಯಾಗಮಯವಾದ ಮರಣವನ್ನು ಅನುಭವಿಸಿ ಪರಲೋಕ ಪರ್ಣಶಾಲೆಯಲ್ಲಿ ಕ್ರಿಸ್ತನ ಸೇವೆಯನ್ನು ವಿವರಿಸುವಂತದ್ದು. ಅನೇಕ ವಿಷಯವನ್ನು ಹೇಳಿದಾಗಲೂ ಒಂದು ಅಂಶವನ್ನು ಹೊತ್ತಿ ತಿಳಿಸುವಂತದ್ದು. ಅದೇನೆಂದರೆ ಅಂತ್ಯದಲ್ಲಿ ಕ್ರಿಸ್ತನು ನಮಗಾಗಿ ತಂದೆಯ ಸನ್ನಿಧಿಯಲ್ಲಿ ಕಾಣಿಸಿಕೊಂಡನು.

ಅದರ ಅರ್ಥ ಏನೆಂದು ಆಲೋಚಿಸಿ. ನಾವು ಪಾಪಿಯ ಮತ್ತು ಬೀಳಲ್ಪಟ್ಟ ಮಾನವರು. ಆತನ ಪ್ರಕಾಶಮಯ ದೇವರ ಮಹಿಮೆಯಿಂದ ದಹಿಸಲ್ಪಡುವವರು ನಾವು ಈಗ ಆತನನ್ನು ಎದುರಿಸಿದರೆ ನಾವು ಎಷ್ಟೋ ಕೆಟ್ಟವರು ಆಗಿದ್ದಾಗ್ಯೂ ಎಷ್ಟೇ ದೇವರ ಆಜ್ಞೆಗಳನ್ನು ಉಲ್ಲಂಘಿಸಿದರೂ ನಮಗಾಗಿ ದೇವರ ಸನ್ನಿಧಾನದಲ್ಲಿ ಕಾಣಿಸಿಕೊಳ್ಳುವ ಒಬ್ಬರಿದ್ದಾರೆ. ತಂದೆಯ ಮುಂದೆ ನಮ್ಮ ಪರವಾಗಿ ಪ್ರತಿನಿಧಿಸಿ

ನಿಲ್ಲುವ ಒಬ್ಬರಿದ್ದರೆ ಈ ಲೋಕದಲ್ಲಿ ಇರುವಾಗ ಎಷ್ಟು ಪ್ರೀತಿಸುವವನು, ಕ್ಷಮಿಸುವವನು ಮತ್ತು ಅಂಗೀಕರಿಸುವ ಕ್ರಿಸ್ತನ ಬಗ್ಗೆ ಚಿಂತಿಸಿರಿ. ಇದೇ ವ್ಯಕ್ತಿ ಈಗ ಪರಲೋಕದಲ್ಲಿ ನಮ್ಮ ಪ್ರತಿನಿಧಿಯಾಗಿದ್ದಾನೆ.

ಇದು ಶುಭ ಸಂದೇಶದ ಮತ್ತೊಂದು ಭಾಗ. ನಮ್ಮ ಪಾಪದ ಫಲವಾಗಿ ದಂಡವನ್ನು ಕಟ್ಟಿದ ಯೇಸುಕ್ರಿಸ್ತನು ಅದನ್ನು ಕೃಜೆಯಲ್ಲಿ ತನ್ನ ಮೇಲೆ ತೆಗೆದುಕೊಂಡನು (1 ಪೇತ್ರ 2:24). ಆದರೆ ಈಗ ಆತನು ದೇವರ ಸನ್ನಿಧಾನದಲ್ಲಿ ನಮ್ಮ ಪ್ರತಿನಿಧಿಯಾಗಿ ಪರಲೋಕ ಮತ್ತು ಭೂಲೋಕದ ಮಧ್ಯದಲ್ಲೂ ಹಾಗೂ ದೈವೀಕ ಮತ್ತು ಮಾನವರ ಇದು ಪರಿಪೂರ್ಣ ಅರ್ಥಕೊಡುವಂತದ್ದಾಗಿದೆ. ಯೇಸುಕ್ರಿಸ್ತನು ದೇವರು ಮತ್ತು ಮನುಷ್ಯನಿಗಾಗಿ (ಪಾಪರಹಿತ ಪರಿಪೂರ್ಣ ಮಾನವನಿಗಾಗಿ) ಆತನೊಬ್ಬನೇ ದೇವರಿಗೂ ಮತ್ತು ಮನುಷ್ಯರ ಮಧ್ಯ ಇರುವ ಪಾಪದಿಂದ ಆದರೆ ಡೊಂಗಾರಕ್ಕೆ ಸೇತುವೆ ಕಟ್ಟಲು ಸಾಧ್ಯ. ಜ್ಞಾಪಕದಲ್ಲಿ ಇಡತಕ್ಕ ಮುಖ್ಯ ವಿಷಯವೇನೆಂದರೆ (ಅನೇಕರು ಇದ್ದಾಗ್ಯೂ) ಆದರೆ ಈಗ ಒಬ್ಬ ಮನುಷ್ಯನು ಇದ್ದಾನೆ. ಮಾನವನ ಎಲ್ಲಾ ಸಂಕಟ, ನೋವು ಮತ್ತು ಶೋದನೆಗಳನ್ನು ತಿಳಿದಾತನು (ಇಬ್ರಿಯರಿಗೆ 4:14,15). ತಂದೆಯ ಮುಂದೆ ನಮ್ಮನ್ನು ಪ್ರತಿನಿಧಿಸುವಾತನು.

"ಯಾಕೆಂದರೆ ದೇವರು ಒಬ್ಬನೇ, ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ. ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೇ. ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. ಇದೇ ತಕ್ಕ ಸಮಯದಲ್ಲಿ ಹೇಳಬೇಕಾದ ಸಾಕ್ಷಿಯು" (1 ತಿಮೊಥಿಯರಿಗೆ 2:5,6).

ಯಾವ ಎರಡು ಪಾತ್ರಗಳನ್ನು ಕ್ರಿಸ್ತನು ಈ ವಚನದಲ್ಲಿ ವಹಿಸಿದ್ದಾನೆ? ಈ ಪಾತ್ರಗಳು ಈ ಲೋಕದ ಪರ್ಣಶಾಲೆಯ ಸೇವೆಯಲ್ಲಿ ಹೇಗೆ ಪೂರ್ವಭಾವಿಯಾಗಿದೆ?

ಹೊಸಒಡಂಬಡಿಕೆಯಲ್ಲಿ ಶ್ರೇಷ್ಠವಾದ ವಾರ್ತೆ ಈಗ ಏನೆಂದರೆ, ಯೇಸುಕ್ರಿಸ್ತನಿಂದ ಪಶ್ಚಾತ್ತಾಪಪಡುವ ಪಾಪಿಗಳಿಗೆ ಅವರನ್ನು ಪ್ರತಿನಿಧಿಸುವ ಯಾರೊಬ್ಬರೂ ತಂದೆಯ ಮುಂದೆ ಇದ್ದಾರೆ. ಅವರು ತಮಗಾಗಿ

ಗಳಿಸಲಾಗದಂತದ್ದನ್ನು ಯಾರೋ ಅವರಿಗಾಗಿ ಗಳಿಸಿದ್ದಾರೆ. ಅದು ಪರಿಪೂರ್ಣ ಪರಿಶುದ್ಧತೆ. ಆ ಪರಿಶುದ್ಧತೆಯೇ ದೇವರ ಸನ್ನಿಧಾನದಲ್ಲಿ ನಿಲ್ಲಲೂ ಸಾಧ್ಯ. ಯೇಸು ತನ್ನ ಪರಿಪೂರ್ಣ ನೀತಿಯಿಂದ ನಮಗಾಗಿ ಶ್ರಮೆಯನ್ನು ಅನುಭವಿಸಿ ಸಾಧಿಸಿದನು (ಇಬ್ರಿಯರಿಗೆ 2:10)ವನ್ನು ಪರಲೋಕ ತಂದೆ ಮುಂದೆ ಪಾಪ ಕ್ಷಮಾಪಣೆಯನ್ನು ಬೇಡುತ್ತಾ, ಇದಲ್ಲದೆ ನಮಗೆ ನಿರೀಕ್ಷೆ ಇಲ್ಲ. ಈಗಲೂ ಇಲ್ಲಿ ಖಂಡಿತವಾಗಿ ನ್ಯಾಯತೀರ್ಪಿನಲ್ಲೂ ಇಲ್ಲ.

(ಈ ಆಲೋಚನೆಯನ್ನು ಕುರಿತು ಪ್ರಾರ್ಥನೆ ಮತ್ತು ಧ್ಯಾನ ಮಾಡಿರಿ. ಹೇಗೆ ಮಾನವನಾಗಿ ಯಾರೋ ಒಬ್ಬರು ಪಾಪದ ಶೋಧನೆಗಳನ್ನು ಅನುಭವಿಸಿ ಪರಲೋಕದಲ್ಲಿ ದೇವರ ಮುಂದೆ ನಿಂತಿರುವುದನ್ನು ಇದು ವೈಯಕ್ತಿಕವಾಗಿ ಯಾವ ಅರ್ಥವನ್ನು ಕೊಡುತ್ತದೆ. ಇದು ಯಾವ ನಿರೀಕ್ಷೆ ಮತ್ತು ಪ್ರೋತ್ಸಾಹವನ್ನು ತರುತ್ತದೆ?

**ಶುಕ್ರವಾರ** **ಜೂನ್ 11**

**ಹೆಚ್ಚಿನ ಚಿಂತನೆ :** ಪರಲೋಕದಲ್ಲಿರುವ ಶ್ರೇಷ್ಠ ದೇವದೂತನಿಗೂ ಕಳೆದು ಹೋದ ಆತ್ಮಗಳಿಗೆ ಬೆಲೆ ತೆತ್ತಲು ಬಲವಿರಲಿಲ್ಲ. ಕೆರುಬಿಯರು ಮತ್ತು ಸೆರಫಿಯರಿಗೆ ಸೃಷ್ಟಿಕರ್ತನಿಂದ ಕೊಡಲ್ಪಟ್ಟ ಮಹಿಮೆಯು ಅದು ಸೃಷ್ಟಿಗಳಿಗೆ ಸಲ್ಲಿಸತಕ್ಕದ್ದು, ದೇವರಿಗೂ ಮತ್ತು ಮಾನವನಿಗೂ ಸಂಧಾನವು ದೇವರಿಗೆ ಸಮಾನನಾದ ವ್ಯಕ್ತಿಯಿಂದಲೇ ಮಧ್ಯಸ್ತಿಕೆ ವಹಿಸತಕ್ಕದ್ದು. ಆತನು ದೇವರಿಗೆ ಸಮಾನನು. ದೇವರಿಗೆ ಯೋಗ್ಯವಾದ ಗುಣವನ್ನು ಹೊಂದಿದವನು. ಅಪರಿಮಿತವಾದ ದೇವರಿಗೆ ಯೋಗ್ಯವೆಂದು ಪ್ರಕಟಿಸಿಕೊಡವನು. ಇವನು ಮಾತ್ರ ಮನುಷ್ಯರ ಪರವಾಗಿ ಪಾಪದ ಲೋಕದಲ್ಲಿ ದೇವರಿಗೆ ಪ್ರತಿನಿಧಿಯಾದನು. ಮನುಷ್ಯರಿಗೆ ಬದಲಾಗಿ ಮತ್ತು ಜಾಮೀನಾಗಲು ಆತನಿಗೆ ಮಾನವ ಗುಣಲಕ್ಷಣಗಳು ಇರತಕ್ಕದ್ದು. ಹಾಗೂ ಮಾನವ ಕುಟುಂಬಕ್ಕೆ ಹೊಂದಿಕೊಂಡಿರತಕ್ಕದ್ದು. ಹಾಗು ದೇವರ ರಾಯಭಾರಿಯಾಗಿ, ದೈವಿಕ ಗುಣ ಹೊಂದಿ ಅಪರಿಮಿತವಾದ ದೇವರಿಗೆ ಹೊಂದಿಕೊಂಡಿದ್ದಾರೆ. ದೇವರನ್ನು ಲೋಕಕ್ಕೆ ತೋರ್ಪಡಿಸಿ ದೇವರಿಗೂ ಮನುಷ್ಯರಿಗೂ ಮದ್ಯಸ್ತಿಕನಾಗಬಹುದು". ಎಲೆನ್ ಜಿ ವೈಟ್ ಸೆಲೆಕ್ಟಡ್ ಮೆಸೇಜಸ್ ಪುಸ್ತಕ, ಪುಟ 257.

"**ಯೇಸು ಹೇಳಿದ್ದು**" ನೀವು ನನ್ನನ್ನು ಜನರ ಮುಂದೆ ಅರಿಕೆ ಮಾಡಿದರೆ ನಾನು ದೇವರ ಮುಂದೆ ಮತ್ತು ಪರಿಶುದ್ಧ ದೇವದೂತರ ಮುಂದೆ ಅರಿಕೆ ಮಾಡುವೆನು. ಲೋಕದೊಳಗೆ ನೀವು ನನ್ನ ಸಾಕ್ಷಿಗಳಾಗಿರಬೇಕು, ಹಾಗೂ ಲೋಕದ ಸ್ವಸ್ತತೆಗೆ ನನ್ನ ಕೃಪೆಯನ್ನು ಹರಿಸುವ ಸಾಧನಗಳಾಗಿರತಕ್ಕದ್ದು. ಆಗ ನಾನು ಪರಲೋಕದಲ್ಲಿ ನಿಮ್ಮ ಪ್ರತಿನಿಧಿಯಾಗಿರುವೆನು. ತಂದೆಯು ನಿಮ್ಮ ತಪ್ಪು ಗುಣಗಳನ್ನು ಗಮನಿಸದೆ ನನ್ನ ಪರಿಪೂರ್ಣತೆಯಲ್ಲಿ ಹೊದಿಸಲ್ಪಟ್ಟವರಾಗಿ ಕಾಣುವನು. ಪರಲೋಕದ ಆಶೀರ್ವಾದವು ನಿಮಗೆ ಬರಲು ನಾನು ಮಾಧ್ಯಮವಾಗಿರುವೆನು. ಯಾರ್‍ಯಾರು ನನ್ನನ್ನು ಮತ್ತು ನನ್ನ ತ್ಯಾಗವನ್ನು ಕಳೆದುಹೋದ ಲೋಕಕ್ಕೆ ಅರಿಕೆ ಮಾಡುತ್ತಾರೋ ಅದೇ ರೀತಿ ನನ್ನ ಮಹಿಮೆ ಮತ್ತು ಸಂತೋಷವನ್ನು ವಿಮೋಚಿಸಲ್ಪಟ್ಟವರಿಗೆ ಹಂಚಿಕೊಳ್ಳತಕ್ಕದ್ದು. ಎಲೆನ್ ಜಿ ವೈಟ್ "ದಿ ಡಿಸೈರ್ ಆಫ್ ಏಜಸ್" ಪುಟ 357.

**ಸಾರಾಂಶ :** ಇಹಲೋಕದ ಪರ್ಣಶಾಲೆಯಲ್ಲಿ ಹಳೆ ಒಡಂಬಡಿಕೆಯ ಯಜ್ಞ ಪದ್ಧತಿಗಳು ಪ್ರಕಾರ ಪ್ರಾಣಿಗಳು ಬಲಿಯಾಗಿ ಪಾಪಮಯವಾದ ಯಾಜಕರಿಂದ ಅರ್ಪಿತವಾಗುತ್ತಿತ್ತು. ಆದರೆ ಈಗ ನಮಗೆ ಯೇಸುಕ್ರಿಸ್ತನು ಪರಿಪೂರ್ಣ ಬಲಿಯಾಗಿ ಪರಲೋಕದ ಪರ್ಣಶಾಲೆಯಲ್ಲಿ ತಂದೆಯ ಮುಂದೆ ನಮ್ಮ ಪ್ರತಿನಿಧಿಯಾಗಿದ್ದಾನೆ. ಇದು ಹೊಸ ಒಡಂಬಡಿಕೆಯ ಮತ್ತು ವಾಗ್ದಾನಗಳಿಗೆ ಮೂಲವಾಗಿದೆ.

* * * * *

## ಆರೋಗ್ಯದ ಲೇಖನಮಾಲೆ
## ಹನ್ನೊಂದನೇ ವಾರ

### * ಅಹಿತ ಒತ್ತಡ

**ಅಹಿತ ಒತ್ತಡವೆಂದರೇನು?**

ಶರೀರವು ಅಧಿಕಶಕ್ತಿಯನ್ನು ಅತ್ಯಂತ ಶೀಘ್ರವಾಗಿ ಉಪಯೋಗಿಸುವ ಗಂಭೀರ ಪರಿಸ್ಥಿತಿಗೆ ಅಹಿತ ಒತ್ತಡವೆನ್ನುತ್ತಾರೆ.

**ಗುರುತಿಸುವುದು ಹೇಗೆ?**

1. ಶೀತ ಹಾಗೂ ತಲೆನೋವು ಆಗಾಗ ಕಾಣಿಸಿಕೊಳ್ಳುವುದು.

2. ವಾರದಲ್ಲಿ ಒಂದು ಸಾರಿ ಪೂರ್ತಿ ರಾತ್ರಿ ನಿದ್ರಿಸಲು ಸಾಧ್ಯವಾಗದಿರುವುದು.
3. ಮುಂಗೋಪ
4. ಭಾವನಾತ್ಮಕ ವಿಷಯಗಳ ಕಾರಣದಿಂದ ತೂಕದಲ್ಲಿ ಬದಲಾವಣೆ.

**ಕಾರಣವೇನು?**

ಪ್ರತಿಯೊಬ್ಬ ಮನುಷ್ಯನಲ್ಲಿಯೂ ಸಹ ಜೀವನದ ಒತ್ತಡಗಳಿಗೆ ಹೊಂದಿ–ಕೊಳ್ಳುವಂತೆ ಅನುವು ಮಾಡಿಕೊಡುವ ನಿರ್ದಿಷ್ಟ ಪ್ರಮಾಣದ ಶಕ್ತಿ ದೊರೆಯುತ್ತದೆ. ಇದು ಶಕ್ತಿಯ ಒಂದು ಬ್ಯಾಂಕ್ ಅಕೌಂಟ್ ಇದ್ದಂತೆ. ಪ್ರತಿದಿನವೂ ನಾವು ಈ ಅಕೌಂಟ್‌ನಿಂದ ಶಕ್ತಿ ಪಡೆದುಕೊಳ್ಳುತ್ತೇವೆ. ಸಂತೋಷದ ಒತ್ತಡಕ್ಕೆ ಕಡಿಮೆ ಪ್ರಮಾಣದ ಶಕ್ತಿಬೇಕು. ಆದರೆ ಅಹಿತ ಒತ್ತಡಕ್ಕೆ ಅಪಾರ ಪ್ರಮಾಣದ ಶಕ್ತಿಯ ಅಗತ್ಯವಿದೆ. ಶರೀರದಲ್ಲಿರುವ ಶಕ್ತಿಯು ಮುಗಿಯುವ ಸ್ಥಿತಿಗೆ ಬಂದಾಗ, ನಮ್ಮ ಶರೀರವು ಸ್ಪಷ್ಟವಾದ ಸೂಚನೆ ನೀಡುತ್ತದೆ.

**ಏನು ಮಾಡಬೇಕು?**

1. ಪ್ರಾರ್ಥನೆ ಹಾಗೂ ಸತ್ಯವೇದ ಓದುವುದರಲ್ಲಿ 30 ನಿಮಿಷ ಕಳೆಯಿರಿ.
2. ಬೆಳಿಗ್ಗೆ ಹಾಗೂ ಸಾಯಂಕಾಲ 30 ನಿಮಿಶ ವೇಗವಾಗಿ ನಡೆಯಿರಿ, ಸಾಕಷ್ಟು ವ್ಯಾಯಾಮ ಮಾಡಿ.
3. ಮಲಗಲಿಕ್ಕೆ ಮೂರು ಗಂಟೆ ಮೊದಲು ಕೆಲಸ ಮಾಡುವುದನ್ನು ನಿಲ್ಲಿಸಿ.
4. ಕಾಫಿ, ಚಹಾ ಅಥವಾ ಧೂಮಪಾನ ಮದ್ಯಪಾನ ಮಾಡಬೇಡಿ.

## * ಕ್ಯಾನ್ಸರ್

**ಕ್ಯಾನ್ಸರ್ ಎಂದರೇನು?**

ಕ್ಯಾನ್ಸರ್ ಎಂಬುದು ಒಂದು ವಿಷಾಣುವಾಗಿ (ವೈರಸ್) ಬಹುದು. ಇದು ಸಾಧಾರಣವಾಗಿ ಒಳ್ಳೆಯ ಜೀವಕಣಗಳನ್ನು ಎಷ್ಟೊಂದು ವೇಗವಾಗಿ ಹೆಚ್ಚಿಸುತ್ತದೆಂದರೆ ಅದರಿಂದ ಪ್ರಾಣಾಪಾಯ ಸ್ಥಿತಿ ಉಂಟಾಗಬಹುದು. ಕೆಲವು ಸಮಯದಲ್ಲಿ ಪರಿಸ್ಥಿತಿ ಮಿತಿಮೀರುವ ತನಕ ಯಾವುದೇ ಲಕ್ಷಣಗಳು ಕಾಣಿಸದೆ ಇರಬಹುದು.

**ಗುರುತಿಸುವುದು ಹೇಗೆ?**

1. ಹಸಿವಾಗದಿರುವಿಕೆ, ಮಲದಲ್ಲಿ ಮತ್ತು ಮೂಗಿನಲ್ಲಿ ರಕ್ತ ಬೀಳುವುದು.
2. ಸಾಧಾರಣ ಶೀತವೂ ಸಹ ಬೇಗ ವಾಸಿಯಾಗದು. ಆಯಾಸವಾಗುವುದು.
3. ಶರೀರದ ಅಂಗಾಂಶಗಳಲ್ಲಿ ಗಂತಿ ಮತ್ತು ಮಾಂಸ ಖಂಡವು ಮುಟ್ಟಿದರೆ ನೋಯುವುದು.

**ಕಾರಣವೇನು?**

ಕೆಲವು ವಿಧವಾದ ಕ್ಯಾನ್ಸರ್‌ಗಳು ನಿಗೂಢವಾಗಿ ಮನುಷ್ಯನ ಮೇಲೆ ದಾಳಿ ಮಾಡುತ್ತವೆ. ಕಾರಣ ಸ್ಪಷ್ಟವಾಗಿರುವುದಿಲ್ಲ. ಆದರೆ ಅನೇಕ ರೀತಿಯ ಕ್ಯಾನ್ಸರ್ ದೇಹದಲ್ಲಿರುವ ಜೀವಕಣಗಳು, ಹಾರ್ಮೋನುಗಳು ಮತ್ತು ಇತರ ರಾಸಾಯನಿಕಗಳನ್ನು ಬದಲಾಯಿಸುವ ವಿಷಕರ ವಸ್ತುಗಳಿಂದ ಬರುತ್ತದೆ.

**ಏನು ಮಾಡಬೇಕು?**

1. ಧೂಮಪಾನ ಬೇಡ. 1/3 ರಷ್ಟು ಕ್ಯಾನ್ಸರ್‌ಗೆ ಧೂಮಪಾನ ಕಾರಣ.
2. ಮದ್ಯಪಾನ ಬೇಡ.
3. ಕನಿಷ್ಟ 20 ನಿಮಿಷ ಪ್ರತಿದಿನ ಸೂರ್ಯಕಿರಣಕ್ಕೆ ನಿಮ್ಮ ಮೈ ಒಡ್ಡಿಕೊಳ್ಳಿ.
4. ಪ್ರತಿದಿನ ವ್ಯಾಯಾಮ ಮಾಡಿ.
5. ಪೌಷ್ಟಿಕವಾದ ಸಮತೋಲನ ಆಹಾರ ಉಪಯೋಗಿಸಿ.
6. ಅಗತ್ಯವಾಗಿ ವೈದ್ಯರನ್ನು ಕಾಣಿರಿ.